

ಡಾ.ವಿನೋದ ಛೆಬ್ಬಿ

**ಹೆಣ್ಣಿನ ಗಡಿಯನ್ನು ಅತಿಕ್ರಮಿಸುವ ಗಂಡಸಿನ ಭಂಡತನ ನಮ್ಮ ಜನಜೀವನದಲ್ಲಿ ಎದ್ದುಕಾಣುತ್ತದೆ.**

# 350: ಹೊಸ ದಾರಿ - 90

ವ್ಯಕ್ತಿಗೂ ಸಮಾಜಕ್ಕೂ ನಡುವಿನ ಗಡಿಯ ಬಗೆಗೆ ಹೋದಸಲ ಚರ್ಚಿಸಿದೆವು. ಸಮಾಜದ ಕೆಲವು ರೂಢಿಗಳು ಗಡಿಮೀರಿ ಒಳಬರುವಾಗ ಸೂಕ್ತವೆಂದು ತಪ್ಪಾಗಿ ನಂಬಿ ಸ್ವಂತಿಕೆಯನ್ನು ಎರವು ಮಾಡಿಕೊಳ್ಳುತ್ತೇವೆ ಎಂದು ಅರ್ಥಮಾಡಿಕೊಂಡೆವು. ಇದರೊಡನೆ ಇನ್ನೊಂದು ವಿಚಾರ ಬಂತು: ಸೀಮಾರೇಖೆಯ ವಿಷಯದಲ್ಲಿ ಗಂಡಿಗೂ ಹೆಣ್ಣಿಗೂ ವ್ಯತ್ಯಾಸವಿದೆಯೆ? ಇದನ್ನು ನನ್ನದೇ ದೃಷ್ಟಾಂತದಿಂದ ಶುರುಮಾಡುತ್ತೇನೆ:

ಇಪ್ಪತ್ತು ವರ್ಷಗಳ ಹಿಂದೆ ಮೊಟ್ಟಮೊದಲ ಸಲ ಹೊಸದಾಗಿ ಕಾರು ಖರೀದಿಸಿದ್ದೆ. ಮಗಳು ಪಿಯುಸಿ ಟ್ಯೂಶನ್ನಿಗೆ ಹೊರಟಿದ್ದಳು. ನನ್ನೊಡನೆ ಬರಲು ಉತ್ಸಾಹದಿಂದ ಆಹ್ವಾನಿಸಿದೆ.

ಮಗಳು: ಬೇಡಪ್ಪಾ, ನಾನು ಬಸ್ಸಿನಲ್ಲಿ ಹೋಗ್ತೀನಿ.

ನಾನು: ನಾನು ಕಾರು ಕೊಂಡಿರುವುದು ಯಾಕೆ? ನನಗೊಬ್ಬನಿಗೇ ಅಲ್ಲ, ಮನೆಯ ಎಲ್ಲರಿಗೂ!

ಮಗಳು: ನನ್ನ ಜೊತೆ ನನ್ನ ಫ್ರೆಂಡ್ಸ್ ಇದ್ದಾರೆ.

ನಾನು: ಸರಿ, ಅವರನ್ನೂ ಪಿಕಪ್ ಮಾಡಿಕೊಳ್ಳೋಣ!

ಮಗಳು: ಬೇಡ ಅಂದರೆ ಬೇಡ! ನಿನಗೇನೂ ಅರ್ಥವಾಗುವುದಿಲ್ಲ! ಎಂದು ಮುಖ ತಿರುಗಿಸಿ ಹೊರಟೇ ಹೋಗಬೇಕೆ? ಉಫ್!

ಕಾರು ಎಲ್ಲರಿಗಾಗಿ ಎಂದು ಔದಾರ್ಯ ತೋರಿದರೂ, ಮಗಳಿಗೆ ಅನುಕೂಲ ಕಲ್ಪಿಸುವುದು ತಂದೆಯ ಕರ್ತವ್ಯ ಎಂದು ಒತ್ತಿಹೇಳಿದರೂ ಆಕೆ ಒಪ್ಪದಿದ್ದದ್ದು ತೀವ್ರ ಅಸಮಾಧಾನ ಉಂಟುಮಾಡಿತು. ಈಗಿನ ಕಾಲದ ಮಕ್ಕಳೇ ಹೀಗೆ ಎಂದುಕೊಂಡು ಸುಮ್ಮನಿದ್ದೆ. ಆನಂತರದ ಇಪ್ಪತ್ತು ವರ್ಷಗಳಲ್ಲಿ ನಾನು ಬೆಳೆದ ನಂತರ ಹಿಂತಿರುಗಿ ನೋಡಿದರೆ ಕಂಡುಬರುವುದೇ ಬೇರೆ! ಯಜಮಾನಿಕೆಯ ಹೆಸರಿನಲ್ಲಿ (ಮಕ್ಕಳು ತಾಯ್ತಂದೆಯರಿಂದ ಏನನ್ನೂ ಮುಚ್ಚಿಡಬಾರದು) ಆಕೆ ಹಾಕಿಕೊಂಡ ಸೀಮಾರೇಖೆಯನ್ನು (ಇದು ನನ್ನ ಜಗತ್ತು; ಹಿರಿಯರಿಗೆ ಸ್ಥಾನವಿಲ್ಲ!) ಅತಿಕ್ರಮಿಸಲು ಹವಣಿಸಿದೆ (ನನ್ನನ್ನು ಅವಲಂಬಿಸಿ ಇರುವುದರಿಂದ ನನ್ನ ಯಜಮಾನಿಕೆಯನ್ನು ಒಪ್ಪಿಕೋ). ಆಕೆ ತನ್ನ ಗಡಿಯನ್ನು ರಕ್ಷಿಸಿಕೊಳ್ಳಲು ನನ್ನನ್ನು ಧಿಕ್ಕರಿಸಿ ದೂರವಾದಾಗ ಯುವಪೀಳಿಗೆಯನ್ನೇ ಬಯ್ದುಕೊಂಡೆ. ವಿಚಿತ್ರವೆಂದರೆ, ಆ ವಯಸ್ಸಿನಲ್ಲಿ ನಾನೂ ಹೀಗೆಯೇ ನಡೆದುಕೊಳ್ಳುತ್ತಿದ್ದುದು ನೆನಪಿಗೆ ಬರಲಿಲ್ಲ!

ಈ ಸಂಭಾಷಣೆಯು ನಡೆದಿದ್ದು ಮಗಳೊಂದಿಗೆ. ಒಂದುವೇಳೆ ಅದೇ ವಯಸ್ಸಿನ ಮಗನಿದ್ದರೆ ಏನೆನ್ನುತ್ತಿದ್ದೆ? 'ಹೌದಾ? ಬಸ್ಸಿನಲ್ಲೇ ಹೋಗು'. ಒತ್ತಾಯವನ್ನಂತೂ ಖಂಡಿತ ಮಾಡುತ್ತಿರಲಿಲ್ಲ. ಇದರರ್ಥವೇನು? ತಂದೆಯಾಗಿ ಮಕ್ಕಳ ಕಾಳಜಿಯನ್ನಲ್ಲ, ಗಂಡಸಾಗಿ ಔದಾರ್ಯ ಮೆರೆಯುತ್ತಿದ್ದೇನೆ! (ಇದಕ್ಕೆ **benevolent patriachy** ಎಂದು ಹೆಸರಿದೆ.) ನನ್ನಲ್ಲಿದು ಹೇಗೆ ಮೊಳೆಯಿತು? ನಾನು ಚಿಕ್ಕವನಿರುವಾಗ ತಾಯಿ ಬೋಧಿಸಿದ್ದಳು: 'ನೀನು ಗಂಡಾಗಿದ್ದೀಯಾ, ಹಾಗಾಗಿ ಹೆಂಗಸರನ್ನು ಸರಿಯಾಗಿ ನೋಡಿಕೊಳ್ಳಬೇಕು!' ನಾನು ನಂಬಿದೆ, ಹೊಣೆಹೊತ್ತೆ. ಹಾಗೆಯೇ ಬೆಳೆದೆ. ಇದು ಬರಬರುತ್ತ ಯಾವ ಹಾದಿ ಹಿಡಿಯಿತೆಂದರೆ, ನನಗೆ ಗೊತ್ತಿರುವ ಹೆಂಗಸರು ಯಾರೇ ಆಗಲಿ, ನನ್ನ ಸಹಾಯ ಬಯಸಬೇಕು; ನಾನು ಸಹಾಯಮಾಡಿ ಭಲೇ ಎನಿಸಿಕೊಳ್ಳಬೇಕು – ಹೀಗೆ ನನ್ನ ಗಂಡಸುತನಕ್ಕೆ ನೀರೆರೆಯುತ್ತಿರಬೇಕು. ಹಾಗಾಗಿ ಹೆಣ್ಣಿನ ಮೆಚ್ಚುಗೆ ಪಡೆಯದ ಹೊರತೂ ನನ್ನ ಸ್ವಂತಿಕೆಯ ಒಂದು ಭಾಗ ನನ್ನಿಂದ ಮರೆಯಾಗಿಯೇ ಉಳಿದು ನನಗೆ ನಾನೇ ಅಪರಿಚಿತನಾಗಿದ್ದೆ. ಹೆಂಗಸರು ಸಹಾಯ ಬಯಸಿ ಬರಲೆಂದು ಮುಂಚೆಯೆಲ್ಲ ತಂತ್ರ ರಚಿಸುತ್ತಿದ್ದುದು ನೆನಪಿದೆ. ಅಂದರೆ, ಹೆಂಗಸರು ನನ್ನಮೇಲೆ ಅವಲಂಬಿತರಾಗಲಿ ಎಂಬ ಆಶಯದಿಂದ ನಾನು ಅವರ ಮೇಲೆ ಅವಲಂಬಿತನಾಗಿದ್ದೆ! ನಿಮಗೆ ಸಹಾಯ ಮಾಡಲು ನನಗೆ ಸಹಾಯಮಾಡಿ ಎಂದಂತೆ – ಸಹಾವಲಂಬನೆ (**codependency**) ಎಂದರೆ ಇದೇ!

ಗಂಡಸರಿಂದ ಹೆಣ್ಣಿನ ಗಡಿಯ ಉಲ್ಲಂಘನೆ ನಮ್ಮ ಜನಜೀವನದಲ್ಲಿ ನಡೆಯುತ್ತಲೇ ಇದೆ. ಉದಾಹರಣೆಗೆ, ಬಸ್ಸಿನಲ್ಲಿ ಮಹಿಳೆಯರಿಗೆ ಕಾದಿಟ್ಟ ಜಾಗದಲ್ಲಿ ಮಹನೀಯರು ಕೂತುಕೊಂಡಿರುವುದನ್ನು ನೋಡಿದ್ದೀರಿ. ಅವರು ಬಂದರೆ ಇವರು ಬಿಟ್ಟೇಳುತ್ತಾರೇನೋ ನಿಜ; ಆದರೆ 'ಹೆಂಗಸರ ಜಾಗ'ವನ್ನು ಆಕ್ರಮಿಸುವ ಬುದ್ಧಿ ಹೇಗೆ ಬಂತು? ಇಲ್ಲಿ ಹೆಣ್ಣಿನ ಗಡಿಪ್ರವೇಶ ಮಾಡುವ ಗಂಡಸಿನ ಉದ್ಧಟತನ ಎದ್ದುಕಾಣುತ್ತದೆ. ಹಾಗೆಯೇ 'ಗಂಡಸಾಗಿ ಎಷ್ಟು ನಾಚಿಕೊಳ್ಳುತ್ತಾನೆ!' ಅಥವಾ, 'ಹೆಣ್ಣಾಗಿಯೂ ಎಷ್ಟು ಧೈರ್ಯದಿಂದ ಮುನ್ನುಗ್ಗುತ್ತಾಳೆ!' ಎಂದೆನ್ನುವುದರ ಹಿಂದೆ ಲಿಂಗೀಯ ಮಾದರಿಗಳಿದ್ದು, ಹೆಣ್ಣಾಗಿ/ಗಂಡಾಗಿ ಇಂಥದ್ದನ್ನು ಮಾಡಕೂಡದು ಎಂದು ಪರೋಕ್ಷ ನಿರ್ಬಂಧವಿದೆ. ಉದಾಹರಣೆಗೆ, ಕುಡಿದು ಮನೆಗೆ ಬರುವ ಗಂಡಸನ್ನೂ ಕುಡಿದು ಮನೆಗೆ ಬರುವ ಹೆಂಗಸನ್ನೂ ನಾವು ಒಂದೇರೀತಿ ಭಾವಿಸಲಾರೆವು. ಪರಿಣಾಮ? ವೈಯಕ್ತಿಕ ಗಡಿಯ ಅತಿಕ್ರಮಣ ಆಗುತ್ತ ಅವರವರ ಇಷ್ಟದಂತೆ ಬದುಕಲು ಅಡ್ಡಿಯಾಗುತ್ತದೆ. ಇಲ್ಲೊಂದು ಜೋಕ್ ಹೇಳಲೇಬೇಕು: ಒಬ್ಬನು ತನ್ನ ಸಹಪಾಠಿ ಹುಡುಗಿ ಬಾರ್‌ನಲ್ಲಿ ಒಬ್ಬಳೇ ಕುಳಿತು ಕುಡಿಯುತ್ತಿದ್ದುದನ್ನು ಕಂಡು, 'ಏನಿದು, ಹೆಣ್ಣಾಗಿ ಒಬ್ಬಳೇ ಕುಳಿತು ಕುಡಿಯುತ್ತಿದ್ದೀಯಾ?' ಎಂದು ಗೇಲಿಮಾಡಿದ್ದಕ್ಕೆ ಅವಳ ಉತ್ತರವೇನು? 'ಹಾಗಂತ ಎರಡು ಪೆಗ್‌ಗೋಸ್ಕರ ಲಿಂಗಬದಲಾವಣೆಯ ಶಸ್ತ್ರಚಿಕಿತ್ಸೆ ಮಾಡಿಸಿಕೊಳ್ಳಲೆ?' ಈ ವಿಡಂಬನೆಯಲ್ಲಿ ಹೆಂಗಸರು ಗಡಿರಕ್ಷಣೆಗಾಗಿ 'ಭಾವನಾತ್ಮಕ ಲಿಂಗ ಬದಲಾವಣೆ'ಗೆ ಸಿದ್ಧರಾಗುವ ಅನಿವಾರ್ಯತೆಯಿದೆ. ಇದು ಮಹಿಳಾ ಪೊಲೀಸರು ಮರ್ಯಾದೆ ಪಡೆದುಕೊಳ್ಳಲು ಒರಟಾಗಿ ಆಡುವುದರಲ್ಲೂ, ಸರಕಾರಿ ಮಹಿಳಾ ಉದ್ಯೋಗಿಗಳು ಗಂಡುಹದ್ದುಗಣ್ಣಿನಿಂದ ತಪ್ಪಿಸಿಕೊಳ್ಳಲು ಕಠಿಣ ಮುಖಭಾವ ಧರಿಸುವುದರಲ್ಲೂ ಎದ್ದುಕಾಣುತ್ತದೆ. ಇನ್ನು, ದಾಂಪತ್ಯದಲ್ಲಂತೂ ಸರಿಯೇ ಸರಿ. ಗಂಡು ಪ್ರಣಯಭಾವ ಅಥವಾ ಆತ್ಮೀಯತೆ ತೋರದಿರುವಾಗ ಹೆಣ್ಣು ಚೌಕಾಶಿ ಮಾಡುತ್ತ ಉಳಿಯುತ್ತಾಳೆಯೇ ಹೊರತು ತನಗೆ ಅಗತ್ಯವಾದುದು ಸಿಗದಿರುವುದರಿಂದ ಬಿಟ್ಟುಹೋಗುವ ದೃಢನಿರ್ಧಾರವನ್ನು ಪ್ರಕಟಿಸುವುದಿಲ್ಲ. ಯಾಕೆ? ಹೆಂಗಸರ ಗಡಿಗೆ ಗಂಡಿನ ಗೌರವವಿಲ್ಲ (ಹೋದರೆ ಹೋಗು, ಒಂಟಿಯಾಗಿ ಹೇಗೆ ಬದುಕುತ್ತೀಯಾ). ಇದರಿಂದ ಹೆಣ್ಣು ಅಧೈರ್ಯದಿಂದ ಅಲ್ಲೇ ಉಳಿಯಬೇಕಾಗುತ್ತದೆ.

ವೈಯಕ್ತಿಕ ಗಡಿಗಳು ಇಷ್ಟೇಕೆ ಮುಖ್ಯವಾಗುತ್ತವೆ ಎಂದರೆ ಇದಕ್ಕೆ ಹುಟ್ಟಿನಿಂದ ಬಂದ ಇತಿಹಾಸವಿದೆ. (ನೋಡಿ: ಕಂತು 285) ನವಜಾತ ಶಿಶುವಿಗೆ ಬಾಯಿ ತೆರೆದಾಗಲೆಲ್ಲ ಸ್ತನವು ಸಿಗುತ್ತಿರುವಾಗ ತಾನೂ ಸ್ತನವೂ ಒಂದೇ ಎಂದುಕೊಂಡಿರುತ್ತದೆ. ಅದು ಸಿಗದಿರುವಾಗ 'ಅದು' ಎಲ್ಲಿ ಎಂದುಕೊಳ್ಳುತ್ತ ತನ್ನಿಂದ 'ಅದನ್ನು' ಬೇರೆಯಾಗಿ ಕಲ್ಪಿಸಿಕೊಳ್ಳಲು ಕಲಿಯುತ್ತದೆ. ಹೀಗೆ ಪ್ರತ್ಯೇಕತೆ ಹುಟ್ಟುತ್ತದೆ. ವೈಯಕ್ತಿಕ ಉನ್ನತಿಗಾಗಿ ಪ್ರತ್ಯೇಕ ಗಡಿ ಅತ್ಯಗತ್ಯ. ಇಲ್ಲದಿದ್ದರೆ ದೊಡ್ಡವರಾದ ನಂತರವೂ ತಾಯಿಯ ಸ್ತನಕ್ಕೆ ಆಸೆಪಡುತ್ತಿದ್ದೆವು!

ಗಡಿಯ ಉಲ್ಲಂಘನೆ ಆಗುತ್ತಿದ್ದರೆ ಗಟ್ಟಿಮನಸ್ಸಿನಿಂದ ಎದುರಿಸಿ ಆತ್ಮಗೌರವ ಕಾಪಾಡಿಕೊಳ್ಳುವುದು ಮುಖ್ಯವಾಗುತ್ತದೆ. ಉದಾಹರಣೆಗೆ, ಬೇಕಾದುದು ಸಿಗದಿದ್ದರೆ ಕೀಳುಭಾವದಿಂದ ಕುಟುಂಬದಲ್ಲೇ ಉಳಿಯುವ ಬದಲು ಹೊರಬಂದು ಸ್ವತಂತ್ರವಾಗಿದ್ದು ಒಂಟಿತನ ಅನುಭವಿಸುವುದೇ ಲೇಸು. ದಾಂಪತ್ಯದಲ್ಲೂ ಅಷ್ಟೇ: ಒಂದೋ ಸೂಕ್ತ ಸಂಗಾತಿ ಇರಬೇಕು, ಇಲ್ಲವೇ ಒಬ್ಬೊಂಟಿತನ ಸರಿ. ಮೂರನೆಯ ಆಯ್ಕೆಯಿಲ್ಲ!

ನಮ್ಮಲ್ಲಿ ಹೆಚ್ಚಿನ ದೀರ್ಘ ದಾಂಪತ್ಯಗಳು ವೈಯಕ್ತಿಕ ಗಡಿಯ ಕೊರತೆಯಿಂದ ಅಥವಾ ಅತಿಕ್ರಮಣದ ಕಾರಣದಿಂದ ನರಳುತ್ತಿವೆ. ಇಂಥ ಸಂಗಾತಿಗಳನ್ನು ಮಾತಾಡಿಸಿದಾಗ ಏನು ಹೇಳುತ್ತಾರೆ? ಇಷ್ಟು ವರ್ಷ ಬದುಕಿದ್ದೇವಂತೆ, ಇನ್ನೇಕೆ ಗಡಿಹಾಕಿಕೊಳ್ಳಬೇಕು? ಇವರಿಗೆ ನನ್ನ ಅರಿಕೆ: ಸಂಬಂಧವೊಂದು ದೀರ್ಘಕಾಲದಿಂದ ಇದೆಯೆಂದರೆ ಸಮರ್ಪಕವಾಗಿದೆ ಎಂದರ್ಥವಲ್ಲ!

ನೀವು ಹೆಣ್ಣಾಗಲಿ, ಗಂಡಾಗಲಿ, ಸಂಗಾತಿಯಿಂದ ನಿಮ್ಮ ಗಡಿಯನ್ನು ಹೇಗೆ ಪ್ರತ್ಯೇಕವಾಗಿ ಇಟ್ಟುಕೊಂಡಿದ್ದೀರಿ? ಏನೇನು ಅತಿಕ್ರಮಣ ನಡೆದಿದೆ? ಮುಕ್ತವಾಗಿ ಹೇಳಿಕೊಳ್ಳಿ.

**ಸಂಪರ್ಕಕ್ಕೆ: 8494933888;**
**Email: vinod.chebbi@gmail.com**